ಪ್ರಕಟಣೆ

ಸದಸ್ಯರ ಗೈರು ಹಾಜರಾತಿಗೆ ಅನುಮತಿ ನೀಡಿಕೆ

ಅಧ್ಯಕ್ಷರು.—ವಿಧಾನಸಭಾ ಸದಸ್ಯರಾದ ಶ್ರೀ ಎಂ. ವೈ. ಘೋರ್ಪಡೆಯವರ ೧೫-೩-೯೦ ರಿಂದ ೩೧-೩-೯೦ ರ ವರೆಗೆ ವೈದ್ಯಕೀಯ ಶುಶ್ರೂಷೆ ಪಡೆಯುತ್ತಿರುವ ಕಾರಣದಿಂದ ಕರ್ನಾಟಕ ವಿಧಾನ ಸಭೆಗೆ ಗೈರು ಹಾಜರಾಗಲು ಅನುಮತಿ ಕೋರಿ ಪತ್ರ ಬರೆದಿರುತ್ತಾರೆ.

ಮೇಲೆ ಸೂಚಿಸಿದ ಅವಧಿಯಲ್ಲಿ ಮಾನ್ಯ ಸದಸ್ಯರು ಸಭೆಗೆ ಗೈರುಹಾಜರಾಗಲು ಅನುಮತಿ ಕೊಡಬೇಕೆಂದು ಸಭೆ ಅಪೇಕ್ಷಿಸುತ್ತದೆಯೇ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.—ಶ್ರೀ ಎಂ. ವೈ. ಘೋರ್ಪಡೆಯವರಿಗೆ ಗೈರುಹಾಜರಾಗಲು ಅನುಮತಿ ನೀಡಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಅಜೀಜ್‌ಸೇಠ್(ಕಂದಾಯ ಸಚಿವರು)(ಮಾನ್ಯ ಮುಖ್ಯಮಂತ್ರಿಗಳ ಪರವಾಗಿ).—೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧ (ಎ) (೩)ನೇ ಕಲಮಿನ ಮೇರೆಗೆ ೧೯೮೮-೮೯ನೇ ಸಾಲುಗಳ ಮೈಸೂರು ವಿದ್ಯುತ್ ಕಾರ್ಖಾನೆಯ ೪೪ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಆ. ಶ್ರೀ ಅಜೀಜ್‌ಸೇಠ್ (ಕಂದಾಯ ಮಂತ್ರಿಗಳು).— ಅವರು ೧೯೫೬ನೇ ಇಸವಿಯ ಕರ್ನಾಟಕ ಮುದ್ರಾಂಕ ಶಾಸನದ ೯ನೇ ಕಲಮಿನ ಮೇರೆಗೆ (೧) ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಪರವಾಗಿ ಮುದ್ರಾಂಕ ಶುಲ್ಕ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ ೫-೨-೧೯೯೦ರಂದು ಹೊರಡಿಸಲಾದ ಆರ್‌ಡಿ ಕೆಎಸ್‌ಆರ್ ೮೯ನೇ ಕ್ರಮಾಂಕದ ಕಿದ್ದುಪಡಿ ಪತ್ರ ಹಾಗೂ

೨) ಬಳ್ಳಾರಿಯಲ್ಲಿರುವ ರೋಟರಿ ಅಂಗವಿಕಲರ ಧಾರ್ಮಿಕ ನ್ಯಾಸ ಪರವಾಗಿ ನೀಡಿರುವ ದಾನದ ಜಮೀನಿಗಾಗಿ ಮುದ್ರಾಂಕ ಶುಲ್ಕ ಹಾಗೂ ನೋಂದಣಿ ಶುಲ್ಕ ಸಂದಾಯದ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ ೫-೩-೯೦ರಂದು ಹೊರಡಿಸಲಾದ ಆರ್‌ಡಿ ೧೨೦ ಇಎಸ್‌ಆರ್ ೮೯ರ ಆದೇಶವನ್ನು ಸಭೆಯ ಮುಂದಿಡುತ್ತೇನೆ.

ಇ. ಶ್ರೀ ಕೆ. ಹೆಚ್. ರಂಗನಾಥ್.—(ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು) ಅವರು ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬ನೇ ಕಲಮಿನ ಮೇರೆಗೆ ೧೯೮೬-೮೭ನೇ ಸಾಲಿನ ಬೆಂಗಳೂರಿನಲ್ಲಿರುವ ಹೆಬ್ಬಾಳದ ಕರ್ನಾಟಕ ರಾಜ್ಯ ಆಗ್ರೋ-ಧಾನ್ಯ-ದವಸ ಉತ್ಪನ್ನಗಳ ನಿಯಮಿತದ ೧೫ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಈ. ಶ್ರೀ ಎಂ. ವೀರಪ್ಪಮೊಯಿಲಿ.—(ಕಾನೂನು, ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವೆಗಳ ಮಂತ್ರಿಗಳು) ಅವರು ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧ (ಎ)ನೇ ಕಲಮಿನ ಮೇರೆಗೆ ೧೯೮೬-೮೭ನೇ ಸಾಲುಗಳ ಬೆಂಗಳೂರಿನಲ್ಲಿರುವ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ ೧೪ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಮುಂದಿಡಲಾಯಿತು.

ಶ್ರೀ ಆರ್. ಎನ್. ನಾಯಕ್.— ನಾನು ಇಲ್ಲಿ ನಿಂತಿದ್ದೇನೆ. ನನ್ನ ಪ್ರಶ್ನೆ ಇದೆ. ಅವಕಾಶ ಬೇಕು. ಹಿಂದೆ ಈ ರೀತಿ ಇರಲಿಲ್ಲ. ದಯವಿಟ್ಟು ನನ್ನ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಬೇಕು. ನಾನು ಇನ್ನೇ ಸಾರಿ ಈ ಸಭೆಗೆ ಬರುತ್ತಿದ್ದೇನೆ. ಒಂದು ಗಂಟೆಯಲ್ಲಿ ಯಾವತ್ತೂ ಪ್ರಶ್ನೋತ್ತರ ಮುಗಿಯುತ್ತಿರಲಿಲ್ಲ. ರೂಲ್ಸ್ ಹೇಳಿದಿರಿ, ಅದನ್ನು ನಾನು ಒಪ್ಪುತ್ತೇನೆ. ಆದರೆ ಒಬ್ಬೊಬ್ಬರಿಗೆ ಒಂದೆರಡು ಸಾರಿ ಅವಕಾಶ ಕೊಟ್ಟಿದ್ದರೆ ಇನ್ನೂ ಹೆಚ್ಚುವಾರು ಪ್ರಶ್ನೆಗಳನ್ನು ಕೇಳುವುದಕ್ಕೆ ಸಮಯ ಇರುತ್ತಿತ್ತು. ಇವತ್ತು ೧೩ ಪ್ರಶ್ನೆಗಳು ಮಾತ್ರ ಇದ್ದವು. ಮೊದಲೆಲ್ಲಾ ೨೦ ಪ್ರಶ್ನೆಗಳಿರುತ್ತಿದ್ದವು. ಈ ೧೫ ಪ್ರಶ್ನೆಗಳು ಮುಗಿಯಲಿಲ್ಲವೆಂದರೆ ಪ್ರೊಸೀಜರ್ ರಾಂಗ್ ಆಗಿದೆ ಎಂದು ತಿಳಿದುಕೊಳ್ಳಬೇಕು. ಆದ ಕಾರಣ ನನಗೆ ಈಗ ಅವಕಾಶ ಕೊಡಿ.